ಅ) ರಾಜ್ಯದಲ್ಲಿರುವ ಸರ್ವೆ ಮಾಡುವವರ ಸಂಖ್ಯೆ ಎಷ್ಟು?

ಆ) ಇದರಿಂದ ರಾಜ್ಯದ ಸರ್ವೆ ಕೆಲಸ ಸುಗಮವಾಗಿ ನಡೆಯುತ್ತಿದೆಯೇ?

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಇದನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 2,950

ಆ) ಮಂಜೂರಾಗಿರುವ ಹುದ್ದೆಗಳು 2,950 ಇದ್ದು, ಅದರಲ್ಲಿ ಕೇವಲ 1,513 ಜನ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 1,437 ಹುದ್ದೆಗಳು ಖಾಲಿ ಇರುವ ಕಾರಣ, ಸರ್ವೇ ಕೆಲಸ ಸುಗಮವಾಗಿ ನಡೆಯುತ್ತಿಲ್ಲ.

ಇ) 1, 437

ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ ನೇರ-ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಭಾರತ ಸಂವಿಧಾನದ 203 (3)ನೇ ಅನುಚ್ಛೇದದ ಪ್ರಕಾರ 1994-95ನೇ ಸಾಲಿನ ಅನುದಾನಗಳ ಮೇಲಿನ ಬೇಡಿಕೆಗಳನ್ನು ವಿಧಾನ ಸಭೆಯ ಮುಂದೆ ಮಂಡಿಸಲು ಮಾನ್ಯ ರಾಜ್ಯಪಾಲರು ಶಿಫಾರಸ್ಸನ್ನು ನೀಡಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಬರಗಾಲ ಮತ್ತು ಅತಿವೃಷ್ಟಿಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ವಿರೋಧಿ ಪಕ್ಷದ ನಾಯಕರು, ನಾವುಗಳು ಎಲ್ಲರೂ ಸೇರಿ ಕಳುಹಿಸಿಕೊಟ್ಟಿದ್ದೇವೆ. ಸಂತ್ರಸ್ತರಿಗೆ ಯಾವುದೇ ಸವಲತ್ತು ಸಿಕ್ಕಿಲ್ಲ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ರಾಜ್ಯದಲ್ಲಿ ಕೆಲವು ಕಡೆ ಅತಿವೃಷ್ಟಿಯಿಂದ ರೈತರು ಕಂಗಾಲಾಗಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು 94 ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ, ಸರಕಾರದಿಂದ ಯಾವುದೇ ಪರಿಹಾರವೂ ಸಿಕ್ಕಿಲ್ಲ, ಹಾಗಾಗಿ ಇದು ಅತಿಮುಖ್ಯವಾದ ವಿಷಯ, ಅದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಮುಖಾಂತರ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಮತ್ತು ಬಿಜೆಪಿ ಸ್ನೇಹಿತರು ಮತ್ತಿತರು ಎಲ್ಲರೂ ಸೇರಿ ಒತ್ತಾಯ ಮಾಡುತ್ತಿದ್ದೇವೆ. ಇವೊತ್ತು ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರಸ್ತಾವನೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ಬಾರಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕಂದಾಯ ಸಚಿವರು ಸಭೆಯನ್ನು ಕೂಡ ಮಾಡಿದ್ದಾರೆ. ಆ ಸಭೆಯಲ್ಲಿ ನಾವು ಇದ್ದು, ಅಧಿಕಾರಿಗಳಿಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ ಯಾವುದೇ ಸಲಹೆಗಳು ಇವೊತ್ತಿಗೂ ಜಾರಿಗೆ ಬರುತ್ತಾ ಇಲ್ಲ. ಕೇವಲ ಮಾತುಗಳು ಮತ್ತು ಭರವಸೆಗಳು ಮಾತ್ರ ಬರುತ್ತವೆಯೇ ವಿನಹ ಪ್ರೊಸೀಡಿಂಗ್ಸ್ ಎಲ್ಲಿವೆ ಅವುಗಳು ಏಕೆ ಇಂಪ್ಲಿಮೆಂಟ್ ಆಗುತ್ತಾ ಇಲ್ಲ, ಅದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಕಳೆದ 5 ವರ್ಷಗಳ ಕಾಲ 89 ರಿಂದ ಇಲ್ಲಿಯವರೆಗೆ ಬರಗಾಲದಿಂದ ನಾಡಿನ ರೈತರು ಕಂಗಾಲಾಗಿದ್ದಾರೆ ಕೂಲಿಕಾರರು ಬಹಳ ಕಷ್ಟದಲ್ಲಿದ್ದಾರೆ. ಸರಕಾರಕ್ಕೆ ಇವರ ಬಗ್ಗೆ ಕಾಳಜಿ ಇಲ್ಲ, ಚಿಂತನೆ ಇಲ್ಲ, ಆ ದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ತಮ್ಮ ಚೇಂಬರಿನಲ್ಲಿ ಮಾತನಾಡಿದಾಗ ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು. ಸ್ಟೇಟ್‌ಮೆಂಟ್ ಮಾಡುವುದಾದರೆ ಮಾಡಲಿ ಇಲ್ಲವೆ ಮೊದಲೇ ಚರ್ಚೆ ಪ್ರಾರಂಭ ಮಾಡಬೇಕೆಂದು ಹೇಳಿದರೆ ನಾವು ಸಿದ್ಧರಿದ್ದೇವೆ. ತಾವೇನು ಹೇಳುತ್ತೀರಿ ಹಾಗೆ ಮಾಡೋಣ. ಅವರನ್ನೂ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಗ್ಗೆ ತಮ್ಮ ಕೊಠಡಿಗೆ ಬಂದು ಬೆಳಗಾಂನಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಇದೆ. ಅಲ್ಲಿನ ವಕೀಲರ ಸಂಘದವರು ಕಳೆದ ಒಂದು ವಾರದಿಂದ ಧರಣಿ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಿಲುವಳಿ ಸೂಚನೆ ಬಗ್ಗೆ ನಾವು ನೋಟೀಸ್ ಕೊಟ್ಟಿದ್ದೇವೆ ಅದರ ಬಗ್ಗೆ ತಾವು ಏನು ಮಾಡುತ್ತೇವೆಂದು ಮೊದಲು ಹೇಳಿ.

ಅಧ್ಯಕ್ಷರು : ಮೊನ್ನೆ ಮಾತನಾಡಿದ ಹಾಗೆ ಅವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ. ಅವರು ಚರ್ಚೆ ಮಾಡಿದ ಮೇಲೆ ಹೇಳಿಕೆ ಕೊಡುತ್ತೀರೋ ಇಲ್ಲವೇ ಹೇಳಿಕೆ ಕೊಟ್ಟ ಮೇಲೆ ಚರ್ಚೆಯಾಗಬೇಕೋ.....

ಶ್ರೀ ಧರ್ಮಸಿಂಗ್ : ಅದು ಅವರ ಮೇಲೇ ಬಿಟ್ಟದ್ದುದು, ನಾವು ಹೇಳಿಕೆ ಕೊಡಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಹುಬ್ಬಳ್ಳಿ, ಧಾರವಾಡದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನಾವು ಹೇಳಿಕೆ ಮಾಡುತ್ತೇವೆಂದು ಹೇಳಿದರು.

ಶ್ರೀ ಧರ್ಮಸಿಂಗ್ : ಹೇಳಿಕೆ ಮಾಡುತ್ತೇವೆ.

(2) ಬೆಳಗಾಂನ ವಕೀಲ ಸಂಘದವರಿಂದ ಕೋರ್ಟಿಗೆ ಬಹಿಷ್ಕಾರ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಗಾಂನಲ್ಲಿರುವ ವಕೀಲರ ಸಂಘದವರು ಯಾವುದೇ ಕಾರಣಕ್ಕೆ ನಾವು ಕೋರ್ಟಿಗೆ ಹೋಗುವುದಿಲ್ಲವೆಂದು ಕಳೆದ 8 ದಿವಸದಿಂದ ಬಹಿಷ್ಕಾರ ಹಾಕಿದ್ದಾರೆ. ಅಕ್ಷಯ ಅಪ್ಟೆ ಎನ್ನುವ ವಕೀಲರು ಕೆಲವು ಮಾಹಿತಿ ಬೇಕು ಎಂದು ಪೋಲೀಸ್ ಸ್ಟೇಷನ್ನಿಗೆ ಹೋದಾಗ, ಬೆಳಗಾಂನಲ್ಲಿನ ಕಡೇ ಬಜಾರ್ ಸ್ಟೇಷನ್ ಸಿ.ಪಿ.ಐ. ಸಿಂಗ್ ಎನ್ನುವವರು ಅವರ ಮೇಲೆ ಹಲ್ಲೆ ಮಾಡಿ, ಅವರು ಆಸ್ಪತ್ರೆಗೆ ಸೇರಿದರು. ಆ ಸರ್ಕಲ್ ಇನ್ಸ್‌ಪೆಕ್ಟರ್ ಅನ್ನು ಸಸ್ಪೆಂಡ್ ಮಾಡಿ ತನಿಖೆ ಮಾಡಿಸಬೇಕೆಂದು ಬಾರ್ ಅಸೋಸಿಯೇಷನ್‌ನವರು ರಿಕ್ವೆಸ್ಟ್ ಮಾಡಿಕೊಂಡರು. ಅದು ಯಾವುದಕ್ಕೂ ಸರಕಾರ ಗಮನ ಕೊಡದೆ ಕಳೆದ 8 ದಿವಸದಿಂದ ಅಲ್ಲಿ ಒಂದು ರೀತಿಯ ಪ್ರಕ್ಷುಬ್ಧ ಪರಿಸ್ಥಿತಿ ಬರುತ್ತಿದೆ. ಬಾಯ್‌ಕಾಟ್ ಮಾಡಿದ್ದಾರೆ ತಮಗೇ ಗೊತ್ತಿದೆ ಬೆಂಗಳೂರು ನಗರ ಬಿಟ್ಟರೆ ಸುಮಾರು 700 ಕ್ಕೂ ಹೆಚ್ಚು ಜನ ವಕೀಲರು ಇರತಕ್ಕಂತಹ ಒಂದು ಸ್ಥಳ ಬೆಳಗಾಂ ಜಿಲ್ಲೆ. ಅದು ಅತ್ಯಂತ ಪ್ರಮುಖವಾದ ಕೇಂದ್ರ. ಇದರ ಪರಿಣಾಮ ಬಿಜಾಪುರ, ತುಮಕೂರು ಜಿಲ್ಲೆಯ ಬಾರ್ ಅಸೋಸಿಯೇಷನ್ ಅವರು ತೀರ್ಮಾನ ತೆಗೆದುಕೊಂಡು ಕೋರ್ಟಿಗೆ ಬಹಿಷ್ಕಾರ ಹಾಕಿದ್ದಾರೆ. ಬೆಂಗಳೂರಿನಲ್ಲೂ ಸಹ ಇವತ್ತು ಸಭೆ ನಡೆಯುತ್ತಿದೆ ಅವರೂ ಬಹಿಷ್ಕಾರ ಹಾಕುತ್ತಿದ್ದಾರೆ. ಅಂದರೆ ಸರಕಾರ ಕಳೆದ 8 ದಿವಸದಿಂದ ಇಂತಹ ಮಹಾ ನಗರದಲ್ಲಿ 700 ಜನ ವಕೀಲರು ಬಹಿಷ್ಕಾರ ಹಾಕಿದಾಗ ಕಕ್ಷಿಗಾರರಿಗೆ ಏನು ಪರಿಸ್ಥಿತಿ ಆಗಿರಬಹುದು ಅದನ್ನು ವಿಚಾರ ಮಾಡಿ.